**ಕರ್ನಾಟಕ ಸರ್ಕಾರ**

ಸಂಖ್ಯೆ:ಎಸ್ ಆರ್ ಸಿ/29/2015-16

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ:04.01.2017

# ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷ ನೇಮಕಾತಿ ಸಮಿತಿಯಿಂದ ವಿವಿಧ ಅರೆ ವೈದ್ಯಕೀಯ ಹುದ್ದೆಗಳಿಗೆ ದಿನಾಂಕ:14.12.2016 ರಿಂದ 19.12.2016 ರವರೆಗೆ ಕೌನ್ಸಿಲಿಂಗ್ ಮೂಲಕ ನೇಮಕಾತಿ ಆದೇಶ ನೀಡಲಾಗಿದ್ದು, ನೇಮಿಸಿದ ಸ್ಥಳದಲ್ಲಿ ವರದಿ ಮಾಡಿಕೊಳ್ಳದೆ ಸ್ಥಳ ಮಾರ್ಪಾಡಿಗಾಗಿ ಹಲವು ಅಭ್ಯರ್ಥಿಗಳು ಹಾಗೂ ಗಣ್ಯ ವ್ಯಕ್ತಿಗಳಿಂದ ಮನವಿ ಸಲ್ಲಿಸಿರುತ್ತಾರೆ.

ಕೌನ್ಸಿಲಿಂಗ್ ಮುಖಾಂತರ ಸ್ಥಳ ಆಯ್ಕೆ ಮಾಡುವ ಬಗ್ಗೆ ದಿನಾಂಕ:06.12.2016 ರಲ್ಲಿ ಎಲ್ಲಾ ಅಭ್ಯರ್ಥಿಗಳಿಗೂ ತಿಳುವಳಿಕೆ ಪತ್ರದಲ್ಲಿ ತಿಳಿಸಿರುವಂತೆ **ಗ್ರಾಮೀಣ ಪ್ರದೇಶದಲ್ಲಿ ಖಾಲಿಯಿರುವ ಹುದ್ದೆಗಳಿಗೆ ಪ್ರಥಮ ಆದ್ಯತೆ ಮೇರೆಗೆ ಬಹಳ ಅತ್ಯವಶ್ಯಕವಾಗಿ ಭರ್ತಿ ಮಾಡಲೇ ಬೇಕಾದ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು,** ಹಾಗೂ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆಮಾಡಿದ ನಂತರ ಯಾವುದೇ ಮಾರ್ಪಾಡುಗಳಿಗೆ/ಶಿಫಾರಸ್ಸುಗಳಿಗೆ ಅವಕಾಶವಿರುವುದಿಲ್ಲವೆಂದು ಈಗಾಗಲೇ ತಿಳಿಸಿದ್ದರೂ ಸಹ ಸ್ಥಳ ಮಾರ್ಪಾಡುಗಳಿಗಾಗಿ ಅರ್ಜಿ ಸಲ್ಲಿಸುತ್ತಿರುವುದು ಕಂಡು ಬರುತ್ತಿದೆ.

ಕೌನ್ಸಿಲಿಂಗ್ ಮೂಲಕ ಸ್ವಯಿಚ್ಛೆಯಿಂದ ಸ್ಥಳ ಆಯ್ಕೆಮಾಡಿಕೊಂಡು ನೇಮಾಕಾತಿ ಆದೇಶ ಪಡೆದು ಕರ್ತವ್ಯಕ್ಕೆ ಹಾಜರಾಗದೆ ಹಾಗೂ ಸ್ಥಳ ಮಾರ್ಪಾಡುಗಳಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಪರಿಗಣಿಸಲಾಗಿರುವುದಿಲ್ಲ. ಕರ್ತವ್ಯಕ್ಕೆ ಹಾಜರಾಗದ ಅಭ್ಯರ್ಥಿಗಳು ತಮ್ಮ ನೇಮಕಾತಿ ಆದೇಶದಲ್ಲಿ ನಿಗಧಿಪಡಿಸಿದ ದಿನಾಂಕದೊಳೊಳಗಾಗಿ ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಹಾಜರಾಗದಿದ್ದಲ್ಲಿ ನಿಮ್ಮ ನೇಮಕಾತಿಯು ನಿಯಮಗಳನ್ವಯ ಯಾವುದೇ ಮುನ್ಸೂಚನೆ ಇಲ್ಲದೆ ರದ್ದಾಗುವುದು.

"ಕಛೇರಿ ಟಿಪ್ಪಣಿ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ"

Shreerupa 4/1/17
ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.